"ಕರಮಚಂದ, ನನ್ಗೆ ಈ ಪ್ರಕರಣದಲ್ಲಿ ಏನೂ ತನಿಖೆ ಮಾಡಲು ಉಳಿದಿಲ್ಲ ಅಂತ ಅನ್ನಿಸುತ್ತೆ. ನೀನು ಈ ಸಂಜೆಯ ಪತ್ರಿಕೆ ನೋಡಿಲ್ಲ!"

ನನ್ನ ಮಾತು ಆಲಿಸಿ, ಅಚ್ಚರಿಗೊಳ್ಳುವ ಸರದಿ ಅವನದಾಗಿತ್ತು.

"ಸಂಜೆಯ ಪತ್ರಿಕೆಯಲ್ಲಿದ್ದ ಸುದ್ದಿ ಈ ಎಡಗಾಲಿನ ಬೂಟಿನ ಕಳವಿನ ಪ್ರಕರಣಕ್ಕೆ ಒಂದು ತಾರ್ಕಿಕ ಅಂತ್ಯ ಹಾಡಿದೆ! ಅದೇನು ಗೊತ್ತೇ? ನಿಕ್ ಕಂಪನಿಯವರು ತಮ್ಮ ಸೆನೆಟರ್ ಬ್ರಾಂಡ್ ಶೂಗಳ ಮಾರಾಟಕ್ಕೆ ಒಂದು ತಂತ್ರ ಹೂಡಿದ್ದಾರೆ. ಆ ಬ್ರಾಂಡಿನ ಶೂ ಖರೀದಿಸಿದಾಗ, ಅದೃಷ್ಟವಿದ್ದರೆ ಲಕ್ಷಾಂತರ ಮೌಲ್ಯದ ಬಹುಮಾನಗಳು ದೊರಕುತ್ತವೆ! ಅದೃಷ್ಟಶಾಲಿಗಳನ್ನು ಹೇಗೆ ಆರಿಸುತ್ತಾರೆ ಗೊತ್ತೇ? ಎಡಗಾಲಿನ ಶೂನ ಒಳಗಡೆ, ಮೇಲ್ಪದರದಲ್ಲಿ ಒಂದು ಸಂಖ್ಯೆ ಇರುತ್ತದೆ. ಅದನ್ನು ಸ್ಥಳೀಯ ಮಾರಾಟಗಾರನಿಗೆ ನೀಡಬೇಕು. ಅದನ್ನು ಆತ ಕಂಪನಿಯ ಜಾಲತಾಣದಲ್ಲಿ ಹಾಕುತ್ತಾನೆ. ಅದೃಷ್ಟವಿದ್ದರೆ, ಬಹುಮಾನಗಳು ದೊರೆಯುತ್ತವೆ. ಗರಿಷ್ಠ ಬಹುಮಾನ ಒಂದು ಲಕ್ಷ ನಗದು. ಪತ್ರಿಕೆಯಲ್ಲಿರುವ ಸುದ್ದಿ ಮಡಿಕೇರಿಯದ್ದು. ಅಲ್ಲೊಬ್ಬನಿಗೆ ಐವತ್ತು ಸಾವಿರ ಸಿಕ್ಕಿತೆಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ. ನಾನು ಅಲ್ಲಿಯ ಮಾರಾಟಗಾರನೊಬ್ಬನಿಗೆ ಕರೆ ಮಾಡಿ, ವಿಚಾರಿಸಿದೆ. ಕಂಪನಿ ಈ ಕುರಿತು ಜಾಹೀರಾತು ನೀಡಿಲ್ಲವಂತೆ. ಮಾರಾಟಗಾರರೇ ಇದನ್ನು ಗ್ರಾಹಕರಿಗೆ ತಿಳಿಸಬೇಕಂತೆ."

"ನೀನನ್ನುವುದೇನು?"

"ಷೋರೂಮಿನವನು ಬಹುಮಾನದ ವಿಚಾರವನ್ನು ನಮಗೆ ಹೇಳೇ ಇಲ್ಲ. ಯಾಕೆ? ಆತನೇ ಈ ಶೂ ಕಳವಿನ ಹಿಂದೆ ಇರುವವನು! ಆತನೇ ಯಾರನ್ನೋ ಕಳಿಸಿ, ಎಡಗಾಲಿನ ಬೂಟಿನಲ್ಲಿರುವ ಸಂಖ್ಯೆ ಪಡೆಯುತ್ತಿರಬೇಕು! ನಂತರ, ಬಹುಮಾನದ ಮೊತ್ತ ಮಾರಟಗಾರನಿಗೇ ಸೇರುತ್ತದೆ!!"

"ತಾಳು! ಇದನ್ನು ಶೂ ಮಾರಾಟವಾಗುವ ಮೊದಲೇ ಮಾಡಬಹುದಲ್ಲ!! ಸಂಖ್ಯೆ ಬರೆದಿರಿಸಿಕೊಂಡರಾಯಿತಷ್ಟೇ!"

"ಅದನ್ನು ನಾನೂ ಊಹಿಸಿದೆ. ಈ ಯೋಜನೆ ಘೋಷಣೆಯಾಗಿದ್ದೇ ಮೂರು ವಾರಗಳ ಹಿಂದೆಯಂತೆ!"

"ಅದು ತಾರ್ಕಿಕವಾಗಿಲ್ಲ. ಯೋಜನೆ ಇತ್ತೀಚೆಗಷ್ಟೇ ಶುರುವಾಗಿದ್ದರೆ, ಹಳೆಯ ಶೂಗಳಲ್ಲಿ ಸಂಖ್ಯೆ ಯಾಕೆ ನಮೂದಿಸಿದ್ದರು?"

"ನನ್ಗೂ ಆ ಅನುಮಾನವಿತ್ತು. ಆತ ಹೇಳಿದ, ಹೆಚ್ಚಾಗಿ ಹೊಸ ಶೂಗಳನ್ನು ಪರಿಚಯಿಸುವಾಗ, ಅದರೊಳಗಡೆ ಸಂಖ್ಯೆ ನಮೂದಿಸಿರುವುದು ಮಾಮೂಲಂತೆ. ಮಾರಾಟ ಕುಸಿತವಾದರೆ, ಇಂತಹ ಯೋಜನೆಗಳನ್ನು ಘೋಷಿಸುತ್ತಾರೆ."

"ಈ ಯೋಜನೆ ಘೋಷಣೆಯಾಗಿದ್ದು ಯಾವಾಗ ಅಂದೆ?"

"ಮೂರು ವಾರಗಳ ಹಿಂದೆ. ನಿನ್ನ ಅನುಮಾನ ಅರ್ಥವಾಯ್ತು. ಅದಕ್ಕೂ ಮೊದಲು ಖರೀದಿಸಿದ ಶೂಗಳಿಗೆ ಇದು ಅನ್ವಯವಾಗುತ್ತದೆಯೇ ಎಂದಲ್ವೇ? ಅದಕ್ಕಿಂತ ಹಿಂದೆ ಶೂ ಖರೀದಿಸಿದ ಗ್ರಾಹಕರಿಗೆ ಮೋಸ ಮಾಡಿದಂತಾಗುವುದೆಂದು ಭಾವಿಸಿ, ಯಾವಾಗ ಖರೀದಿಸಿದರೂ, ಈ ಬಹುಮಾನಗಳು ಅನ್ವಯಿಸುವುದೆಂದು ಕಂಪನಿ ಹೇಳಿದೆಯಂತೆ. ಆದರೆ, ಈ ಮಾಹಿತಿಯನ್ನು ಅಂತಹ ಗ್ರಾಹಕರಿಗೆ ನೀಡುವುದು ಮಾರಾಟ ಮಳಿಗೆಯವರ ಜವಾಬ್ದಾರಿ. ಪ್ರಾಯಶಃ ವಿರಾಜಪೇಟೆಯ ಮಾರಾಟಗಾರರು ಇದನ್ನು ನೀಡಿಲ್ಲ. ಯಾವುದೇ ಗ್ರಾಹಕರೂ ಇದನ್ನು ಹೇಳಿಲ್ಲ. ಮಾರಾಟಗಾರರೂ ಹೇಳಿಲ್ಲ. ಆದ್ದರಿಂದ ಶೂ ಕಳವಿನ ಹಿಂದೆ ಇರೋದು ಮಾರಾಟಗಾರರೇ ಎಂದು ಊಹಿಸಬಹುದಲ್ವೇ?"

"ಜುಜುಬಿ ಬಹುಮಾನಕ್ಕೆ ಆಸೆ ಪಟ್ಟು, ಮಾರಾಟಗಾರ ಕಳವು ಮಾಡ್ತಿದ್ದಾನೆ ಅಂತಿಯೇನು?"